ನನ್ನ ಗಮನಕ್ಕೆ ಬಂದಿದೆ. ಬಿಜಾಪುರ ಡಿಸಿಸಿ ಬ್ಯಾಂಕ್ ಅದು ಬಹಳ ಒಳ್ಳೆಯ ಬ್ಯಾಂಕ್. ಈಗ ನೀವು ರಿಪೋರ್ಟ್ ತರಿಸಿಕೊಳ್ಳಿ. ಅಂತಹ ಒಂದು ಬ್ಯಾಂಕ್‌ನಲ್ಲಿ ಸರ್ಕಾರ ರಾಜಕೀಯ ಹಸ್ತಕ್ಷೇಪ ಮಾಡುವುದು ಸರಿಯಲ್ಲ. ನಿನ್ನೆ ಲಾ ಮಿನಿಸ್ಟರ್ ಹೇಳುವಾಗ ನಾನು ಹೇಳಿದೆ, ಇದು ಸಹಕಾರಿ ಇಲಾಖೆ ಅಲ್ಲ ಎಂದು ಇದು ಇಲ್ಲ ಕಾಯಿದೆ, ಅದರಲ್ಲಿ ಯಾರು ಬೇಕಾದರೂ ಹಸ್ತಕ್ಷೇಪ ಮಾಡುವುದಕ್ಕೆ ಬರುತ್ತದೆಂದು ಸಹಜವಾಗಿ ಉತ್ತರ ಕೊಟ್ಟರು. ಆ ರೀತಿ ಮಾಡಬಾರದು. ಈ ಚುನಾವಣೆಗಳನ್ನು ಏನು ಮುಂದೆ ಹಾಕಿದ್ದೀರಿ, ಅದನ್ನು ಚುನಾವಣೆ ಮಾಡುವುದಕ್ಕೆ ಆದೇಶ ಮಾಡಬೇಕು. ಆ ಚುನಾವಣೆಗಳನ್ನು ಮುಂದೆ ಹಾಕಬಾರದೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಶಿವಾನಂದ ಎಂ. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಅದಕ್ಕೆ ಪೂರಕವಾಗಿ ನಾನು, ಸಿಂಧ್ಯ ಹಾಗೂ ಜಗದೀಶ್ ಶೆಟ್ಟರ್‌ರವರು ಒಂದು ನೋಟೀಸ್ ಕೊಟ್ಟಿದ್ದೆವು ಅದಕ್ಕೆ ಒಂದು ಟೈಂ ಮಾಡಿ ಹೇಳಿಬಿಡಿ.

ಅಧ್ಯಕ್ಷರು:- ಮಾನ್ಯ ವಿಶ್ವನಾಥ್‌ರವರೆ ನಮ್ಮ ಆಫೀಸ್‌ಗೆ ಬನ್ನಿ, ನಿಮ್ಮ ಹತ್ತಿರ ಮಾತನಾಡುತ್ತೇನೆ.

(ಉ) ಶಾಸಕರ ವಿದೇಶ ಪ್ರವಾಸದ ಬಗ್ಗೆ:-

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) :- ಮಾನ್ಯ ಅಧ್ಯಕ್ಷರೆ, ಮೊನ್ನೆ ದಿವಸ ನಾನು ಹಾಗೂ ಕೆ.ಬಿ. ಮಲ್ಲಿಕಾರ್ಜುನ್ ಒಂದು ಪ್ರಿವಿಲೇಜ್ ಮೋಷನ್ ಮೂವ್ ಮಾಡಿದೆವು. ಆಗ ಮಾನ್ಯ ಉಪಾಧ್ಯಕ್ಷರು ಪೀಠದಲ್ಲಿದ್ದರು, ಈ ವಿಚಾರದ ಬಗ್ಗೆ ಸೋಮವಾರ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆಂದು ಹೇಳಿದರು. ಆಗ ಸದನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಇದ್ದರು. ಈಗ ಇಲ್ಲಿ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಇದ್ದಿದ್ದರೆ ಒಳ್ಳೆಯದಿತ್ತೆಂದು ಅನ್ನಿಸುತ್ತದೆ. ಅವರು ಉತ್ತರ ಕೊಡಬೇಕು.

ಅಧ್ಯಕ್ಷರು:- ನಾನು ಬಹುಶಃ ಮೇಲ್ಮನೆಯಲ್ಲಿ ಇರಬಹುದು. ಅಡ್ಮಿಷನ್ ಆದಮೇಲೆ ಉತ್ತರ ಕೊಡುತ್ತಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಒಂದು ಪತ್ರಿಕಾ ವರದಿ ಮೇರೆಗೆ ಉಚ್ಚ ನ್ಯಾಯಾಲಯ, ಶಾಸಕರ ವಿದೇಶ ಪ್ರವಾಸ ಕಾರ್ಯಕ್ರಮದ ಬಗ್ಗೆ ಒಂದು ತಡೆಯಾಜ್ಞೆ ಹೊರಡಿಸುತ್ತದೆ. ನಾನು 4 ವರ್ಷದಲ್ಲಿ ವಿದೇಶ ಪ್ರವಾಸ ಅಲ್ಲ ಸ್ವದೇಶ ಪ್ರವಾಸ ಕೂಡ ಹೋಗಿಲ್ಲ.

ಈ ಒಂದು ವರದಿಯಲ್ಲಿ ಶಾಸಕರು ವಿದೇಶ ಪ್ರವಾಸಕ್ಕೆ ಹೋಗಿದ್ದಾರೆಂಬುದು ಪತ್ರಿಕೆಗಳಲ್ಲಿ ಏನು ಬಂತು, ಅದರ ಮೇಲೆ ಶ್ರೀ ಕೃಷ್ಣಭಟ್ ಎನ್ನುವವರು ಪಬ್ಲಿಕ್ ಇಂಟ್ರಸ್ಟ್ ಲಿಟಿಗೇಶನ್ ಅನ್ನು ಹೈಕೋರ್ಟ್‌ನಲ್ಲಿ ಫೈಲ್ ಮಾಡಿದರು, ಅದಕ್ಕೆ ಹೈಕೋರ್ಟ್‌ನವರು ಒಂದು ನೋಟೀಸ್ ಅನ್ನು ಸರ್ಕಾರಕ್ಕೆ ಇಷ್ಯೂ ಮಾಡಿದ್ದಾರೆ.

ಶ್ರೀ ಕರಿಯಣ್ಣ:- ಮಾನ್ಯ ಅಧ್ಯಕ್ಷರೇ, ಈ ವಿಚಾರವಾಗಿ ಮೊನ್ನೆ ದಿವಸ ಚರ್ಚೆ ಆಗಿದೆ.

ಅಧ್ಯಕ್ಷರು:- ಸ್ವಲ್ಪ ತಡೆಯಿರಿ, ಈಗ ನಾನು ಇದನ್ನು ಹಕ್ಕುಚ್ಯುತಿ ನಿರ್ಣಯಕ್ಕೆ ಅಡ್‌ಮಿಟ್ ಮಾಡಿಕೊಳ್ಳುವುದಕ್ಕೆ ಮನದಟ್ಟು ಮಾಡುತ್ತಿದ್ದಾರೆ, ಎರಡು ನಿಮಿಷವಷ್ಟೇ ಅವರು ಹೇಳುವುದು.

ಶ್ರೀ ಕರಿಯಣ್ಣ:- ಮಾನ್ಯ ಅಧ್ಯಕ್ಷರೇ, ಈಗಾಗಲೇ ಇದರ ಬಗ್ಗೆ ಡಿಟೈಲಾಗಿ ಚರ್ಚೆಯಾಗಬೇಕೆಂದು ಸರ್ಕಾರವೂ ಒಪ್ಪಿಕೊಂಡಿದೆ. ಮೊನ್ನೆ ದಿವಸ ಚರ್ಚೆಯಾದಾಗ ಮಾನ್ಯ ಡಿ.ಬಿ. ಚಂದ್ರೇಗೌಡರು ಸಭೆಯಲ್ಲಿ ಇದ್ದರು, ಇದರ ಬಗ್ಗೆ ಪ್ರಸ್ತಾಪ ಮಾಡಿದಾಗ ಇದು ಡಿಟೈಲಾಗಿ ಚರ್ಚೆಯಾಗಬೇಕೆಂದು ಆಗಿದೆ, ಚರ್ಚೆಯೊಳಗೆ ಇದು ಹಕ್ಕುಚ್ಯುತಿಗೆ ಬರುತ್ತದೆಯೋ, ಇಲ್ಲವೋ, ಎಂಬುದನ್ನು ನೋಡಿಕೊಂಡರೆ ಆಯಿತು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಮಾನ್ಯ ಅಧ್ಯಕ್ಷರೇ, ಮಾನ್ಯ ಚಂದ್ರೇಗೌಡರು ಆವತ್ತು ಚರ್ಚೆ ನಡೆಯಲಿ ಎಂದು ಒಪ್ಪಿಕೊಂಡರು.

ಶ್ರೀ ಕರಿಯಣ್ಣ:- ಆ ದಿವಸ ಸಭೆಯಲ್ಲಿ ಉಪಾಧ್ಯಕ್ಷರು ಅಧ್ಯಕ್ಷರ ಪೀಠದಲ್ಲಿದ್ದರು.

ಅಧ್ಯಕ್ಷರು:- ಮಾನ್ಯ ಜಯಪ್ರಕಾಶ್ ಹೆಗಡೆಯವರೇ, ಮಾನ್ಯ ಸದಸ್ಯರೂ ಸಹ ಅದನ್ನೇ ಹೇಳುತ್ತಿದ್ದಾರೆ.

ಶ್ರೀ ಕರಿಯಣ್ಣ:- ನಾನು ಸರ್ಕಾರ ಒಪ್ಪಿಕೊಂಡಿದೆ, ಅದನ್ನೇ ನಾನು ಹೇಳುತ್ತಿರುವಂಥಾದ್ದು, ಮತ್ತೆ ಏಕೆ ಸಭೆಯಲ್ಲಿ ಪ್ರಸ್ತಾಪ ಮಾಡುವಂಥಾದ್ದು ಎಂದು ಹೇಳುತ್ತಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ಮಾನ್ಯ ಅಧ್ಯಕ್ಷರೇ, ಹಾಗಾದರೆ ಚರ್ಚೆಯನ್ನು ಪ್ರಾರಂಭ ಮಾಡಿಸಿ.

ಶ್ರೀ ಕರಿಯಣ್ಣ:- ಈಗ ಚರ್ಚೆಯಾಗಬೇಕೆಂದು ಅಧ್ಯಕ್ಷರು, ಉಪಾಧ್ಯಕ್ಷರು ಒಪ್ಪಿಕೊಂಡಿದ್ದಾರೆ.

ಅಧ್ಯಕ್ಷರು:- ಈಗ ಪುನಃ ಈ ವಿಷಯವನ್ನು ಪ್ರಸ್ತಾಪ ಮಾಡುತ್ತೀರಿ, ಎಂದು ಮಾನ್ಯ ಕರಿಯಣ್ಣನವರು ಕೇಳುತ್ತಿದ್ದಾರಷ್ಟೆ, ಆದರೆ ಚರ್ಚೆ ಈಗ ಅಲ್ಲ, It is not yet admitted ಆಡ್‌ಮಿಷನ್ ಆದಮೇಲೆ ಚರ್ಚೆ ಈಗ ಮಾನ್ಯ ಸದಸ್ಯರು ಆಡ್‌ಮಿಶನ್ ಸ್ಟೇಜ್‌ನಲ್ಲಿ ಹೇಳುತ್ತಿದ್ದಾರೆ, ಮೊನ್ನೆ ದಿವಸ ಪೀಠದಲ್ಲಿ ಉಪಾಧ್ಯಕ್ಷರು ಇದ್ದರು, ಆಗ ಮಾನ್ಯ ಸದಸ್ಯರು ಏನು ಹೇಳಿದ್ದರೆಂಬ ಬಗ್ಗೆ ನಾನು ಕೇಳಿಸಿಕೊಂಡಿದ್ದೇನೆ, ನಾನು ಇಲ್ಲಿಂದ ಹೋದರೂ ಸಹಿತ ಇಲ್ಲಿ ಏನು ನಡೆಯುತ್ತಿದೆ, ಎಂಬ ಬಗ್ಗೆ ನಾನು ನೋಡುತ್ತಿರುತ್ತೇನೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಮಾನ್ಯ ಅಧ್ಯಕ್ಷರೇ, ಆ ದಿವಸ ತಾವಿದ್ದಾಗ ವಿಷಯವನ್ನು ಪ್ರಸ್ತಾಪ ಮಾಡಿದೆ, ಆದರೆ ಅದನ್ನು ಮಧ್ಯಾಹ್ನದ ಮೇಲೆ ಮತ್ತೆ ನಾವೆಲ್ಲರೂ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ, ಸೋಮವಾರ ಈ ವಿಷಯಕ್ಕೆ ಚರ್ಚೆ ಮಾಡಲು ಅವಕಾಶವನ್ನು ಕೊಡುತ್ತೇವೆಂದು ಹೇಳಿದ್ದೀರಿ, ಈಗ ತಾವು ಹಕ್ಕುಚ್ಯುತಿ ನಿರ್ಣಯವನ್ನು ಒಪ್ಪಿ ಇದಕ್ಕೆ ಅವಕಾಶ ಕೊಡುತ್ತಿದ್ದೀರಾ? ಅಥವಾ ಇದನ್ನು ಹಕ್ಕುಚ್ಯುತಿ ನಿರ್ಣಯಕ್ಕೆ ಒಪ್ಪಬೇಕೋ, ಬೇಡವೋ, ಎಂಬ ಬಗ್ಗೆ ಚರ್ಚೆಯಾಗಬೇಕಾ ಎಂಬ ಬಗ್ಗೆ ನನಗೆ ಸ್ಪಷ್ಟವಾಗಬೇಕು.

ಅಧ್ಯಕ್ಷರು :- ಈಗ ಇದರ ಬಗ್ಗೆ ನಾನು ಹೇಳುತ್ತೇನೆ, ದಯಮಾಡಿ ತಾವು ಕುಳಿತುಕೊಳ್ಳಿ, ಇದು ಮೇಲ್ನೋಟಕ್ಕೆ ಚರ್ಚೆಗೆ ಅವಶ್ಯಕತೆ ಇರುವ ವಿಷಯವೆಂದು ನನಗನ್ನಿಸುತ್ತದೆ, ಆದಕ್ಕೋಸ್ಕರ ನಾನು ಹೇಳುವುದೇನೆಂದರೆ ಈಗಾಗಲೇ ಉಚ್ಚ ನ್ಯಾಯಾಲಯದವರು ಇದರ ಬಗ್ಗೆ ಜಡ್ಜ್‌ಮೆಂಟ್ ಕೊಟ್ಟಿರುವುದರಿಂದ, ಅದರ ಕಾಪಿ ಬಂದಮೇಲೆ ಇದನ್ನು ಪುನಃ ಪರಿಶೀಲಿಸೋಣ, ಆದರೆ ಈ ಸಬ್ಜೆಕ್ಟ್ ಜೀವಂತವಾಗಿ ಇರುತ್ತದೆ, ಇದು It is not cancelled ಹೆಚ್ಚು ಕಡಿಮೆಯಾಗಿದೆ, ಮೇಲ್ನೋಟಕ್ಕೆ ಜೀವಂತವಾಗಿದೆ, ಇದು ಒಳ್ಳೆಯ ವಿಷಯವೂ ಆಗಿದೆ, ನನ್ನ ಆಸೆ ಏನೆಂದರೆ

ಉಚ್ಚ ನ್ಯಾಯಾಲಯದವರು ಏನು ಜಡ್ಜ್‌ಮೆಂಟ್ ಹೇಳಿದ್ದಾರೆಂಬುದನ್ನು ನೋಡಿಕೊಂಡು, ಆಮೇಲೆ ಇದನ್ನು ಅಡ್‌ಮಿಟ್ ಮಾಡುವುದೋ, ಬೇಡವೊ, ಎಂಬ ಬಗ್ಗೆ ನೋಡಿ, ಆಮೇಲೆ ಈ ವಿಷಯವನ್ನು ತೆಗೆದುಕೊಳ್ಳೋಣ.

ಶ್ರೀ ಎಂ. ಚಂದ್ರಪ್ಪ:- ಮಾನ್ಯ ಅಧ್ಯಕ್ಷರೇ, ನಿಮಗೆ ಅವರು ಮನವರಿಕೆ ಮಾಡುತ್ತಾರೆ.

ಅಧ್ಯಕ್ಷರು:- ತಾವು ದಯವಿಟ್ಟು ಕೇಳಿ, ಉಚ್ಚ ನ್ಯಾಯಾಲಯದವರು ಏನು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ, ಅದನ್ನು ನೋಡಿ, ಆನಂತರ ಫೈನಲ್ ಆಗಿ ಅಡ್ಮಿಷನ್ ಮಾಡುವುದಕ್ಕೆ ಅವಕಾಶ ಮಾಡುತ್ತೇನೆ, ಅಲ್ಲಿಯವರೆಗೆ ಇದು ಜೀವಂತವಾಗಿರುತ್ತದೆ. ಅಡ್ಮಿಷನ್ ಮಾಡಿದ ನಂತರ ಚರ್ಚೆಗೆ ಅವಕಾಶ ಮಾಡುತ್ತೇನೆ, ಈಗ ಸಿ.ಇ.ಟಿ.ಯ ವಿಷಯವನ್ನು ಹೇಳಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಮಾನ್ಯ ಅಧ್ಯಕ್ಷಕರೇ, ನಾನು ಇಲ್ಲಿ ಕೊಟ್ಟಿರುವಂತಹ ವಿಚಾರಗಳೇನೆಂದರೆ ಹಕ್ಕುಚ್ಯುತಿಗೆ ನ್ಯಾಯಾಲಯದಲ್ಲಿ ಇದು ದಾಖಲೆಯಾಗಿರುವಂಥಾದ್ದು ಕೇಸನ್ನು ದಾಖಲೆ ಮಾಡಿರುವುದು.

ಅಧ್ಯಕ್ಷರು:- ಇಲ್ಲಿ ನ್ಯಾಯಾಲಯದ ಬಗ್ಗೆ ಏನು ಮಾತನಾಡುವುದಕ್ಕೆ ಆಗುವುದಿಲ್ಲ, ಇದಕ್ಕೆ ನಾನು ಅವಕಾಶವನ್ನು ಕೊಡುವುದಿಲ್ಲ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಹತ್ತಿರ ದಾಖಲೆಗಳು ಇವೆ, ಹಿಂದೆ ಯಾವ್ಯಾವ ಟೈಮ್‌ನಲ್ಲಿ ನಮ್ಮ ಈಗಿನ ಗೃಹ ಮಂತ್ರಿಗಳು ಏನೇನು ಮಾತನಾಡಿದ್ದಾರೆಂಬ ಬಗ್ಗೆ ದಾಖಲೆಗಳು ಇವೆ, ನಾವು ಏಕೆ ಮಾತನಾಡಬಾರದು? ನಮ್ಮ ಬಗ್ಗೆ ಅಲ್ಲಿ ಬೇಕಾದಷ್ಟು ಚರ್ಚೆಯಾಗಬಹುದು.

ಅಧ್ಯಕ್ಷರು:- ಈಗ ಅಡ್‌ಮಿಟ್ ಮಾಡುವುದಿಲ್ಲವೆಂದು ಯಾರು ಹೇಳಿದ್ದಾರೆ? ಇದು ಜೀವಂತವಾಗಿದೆ, ಮೇಲ್ನೋಟಕ್ಕೆ ಇದು, It is a fit case for discussion. I am admitting myself.

ಶ್ರೀ ಕೆ.ಬಿ. ಮಲ್ಲಿಕಾರ್ಜುನ :- ಮಾನ್ಯ ಅಧ್ಯಕ್ಷರೇ, ನಾವು ಏನು ಹೇಳಿದ್ದೇವೆಂದರೆ ನ್ಯಾಯಾಲಯದಲ್ಲಿರತಕ್ಕಂಥ ಮೊಕದ್ದಮೆಯ ಜೊತೆಯಲ್ಲಿ ಕೆಲವು ಪತ್ರಿಕೆಗಳ ಮೇಲೂ ಹಕ್ಕುಚ್ಯುತಿ ಇದೆ, ಸರ್ಕಾರದ ಮೇಲೂ ನಮ್ಮ ಹಕ್ಕುಚ್ಯುತಿ ಇದೆ, ಯಾರ್ಯಾರು ಕೆಲಸದಲ್ಲಿ ಇವರು ನಿರ್ವಹಣೆ ಮಾಡದೇ, ಇರುವಂಥಾದ್ದು, ಮಾನ್ಯ ಗೃಹ ಸಚಿವರು ಹಿಂದೆ ಹೇಳಿರುವಂತಹ ಒಂದು ದಾಖಲೆಯೂ ನಮ್ಮ ಹತ್ತಿರ ಇದೆ, ಒಂದು ನಿರಂತರವಾಗಿರುವಂತಹ ಶಾಸಕರ ಬಗ್ಗೆ ಅವಹೇಳನಕರವಾಗಿ ಮಾತನಾಡುವಂಥಾದ್ದು ಒಂದು ಪ್ರಕ್ರಿಯೆಯಾಗಿದೆ. ಇಷ್ಟು ವಿಷಯಗಳನ್ನು ತಾವು ಚರ್ಚೆಯಾಗಬೇಕೆಂದು ಇದ್ದರೆ ನಮ್ಮ ತಕರಾರು ಏನೂ ಇಲ್ಲ.

ಅಧ್ಯಕ್ಷರು:- ನಾನು ಚರ್ಚೆ ಮಾಡೋಣವೆಂದು ಹೇಳುತ್ತಿದ್ದೇನಲ್ಲಾ, ನಾನು ಅಡ್‌ಮಿಶನ್ ಮಾಡಿಕೊಳ್ಳಲಿಲ್ಲವೆಂದು ಏನು ಹೇಳುಲಿಲ್ಲವಲ್ಲಾ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಅದನ್ನು ಯಾವ ದಿವಸವೆಂದು ನಿಗದಿ ಮಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಮಾನ್ಯ ಅಧ್ಯಕ್ಷರೇ, ಇಲ್ಲಿ ಮೂರು ವಿಷಯಗಳ ಬಗ್ಗೆ ಚರ್ಚೆಯಾಗಬೇಕಾಗಿದೆ, ಮೊದಲನೆಯದಾಗಿ ಪತ್ರಿಕೆಗಳಲ್ಲಿ ವಿದೇಶದ ಪ್ರವಾಸದ ಬಗ್ಗೆ ಶಾಸಕರುಗಳ ಬಗ್ಗೆ ಏನು ಮಾಡದೇ ಇದ್ದರೂ ಬಂದಿರುವಂಥಾದ್ದು,

ಅಧ್ಯಕ್ಷರು:- ಸರ್ಕಾರವೂ ಸಹ ಇದು ಚರ್ಚೆಯಾಗಬಹುದೆಂದು ಒಪ್ಪಿದ್ದಾರಲ್ಲಾ...

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಮಾನ್ಯ ಅಧ್ಯಕ್ಷರೇ, ಮತ್ತೆ ಉಚ್ಚ ನ್ಯಾಯಾಲಯದಿಂದ ಸ್ಟೇ ಆರ್ಡರ್ ಕೊಟ್ಟಿರುವಂಥಾದ್ದು ಚರ್ಚೆಯಾಗಬೇಕಾಗುತ್ತದೆ.

ಅಧ್ಯಕ್ಷರು:- ಅದರ ಬಗ್ಗೆ ಇಲ್ಲಿ ಚರ್ಚೆಯಾಗಬಾರದು, ತಾವು ಆರ್ಟಿಕಲ್ 201 ಅನ್ನು ತಾವು ಓದಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಮಾನ್ಯ ಅಧ್ಯಕ್ಷರೇ, ಈಗ ನ್ಯಾಯಾಲಯದಲ್ಲಿ ಶಾಸಕರ ಬಗ್ಗೆ ಚರ್ಚೆಯಾಗಬೇಕಾದರೆ ಈ ವಿಷಯವಾಗಿ ಹಿಂದಿನ ಮಾನ್ಯ ಮುಖ್ಯಮಂತ್ರಿಗಳು, ಕೆಂಗಲ್ ಹನುಮಂತಯ್ಯನವರು ಏನು ಹೇಳಿದ್ದಾರೆಂಬ ಬಗ್ಗೆಯೂ ನಾನು ಸದನದ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು:- ನಾನು ಎಲ್ಲವನ್ನೂ ಓದಿ ನೋಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಮಾನ್ಯ ಅಧ್ಯಕ್ಷರೇ, ಅದರ ಮೇಲೆ There was no cause of action to grant ಸ್ಟೇ ಆರ್ಡರ್ ಮತ್ತೆ ಸರ್ಕಾರದ ತಪ್ಪು ಇದೆ, ಕೋರ್ಟಿನಿಂದ ನೋಟೀಸ್ ಬಂದರೆ, ಅದಕ್ಕೆ ಉತ್ತರವನ್ನು ಹೇಳುವುದಕ್ಕೆ ಹೋಗಿಲ್ಲ, ಗೌವರ್ನಮೆಂಟ್ ಪ್ಲೀಡರ್ ಏನು ಹೇಳುತ್ತಾರೆಂದರೆ 'I have no instructions.' ಎಂದು ಇದರ ಬಗ್ಗೆಯೂ ಚರ್ಚೆ ಆಗಬೇಕಾಗಿದೆ.

ಅಧ್ಯಕ್ಷರು:- ಮಾನ್ಯ ಜಯಪ್ರಕಾಶ್ ಹೆಗಡೆಯವರೇ, ಈಗ ಚರ್ಚೆ ಬೇಡ, ನಾನು ಇನ್ನು ಎರಡು, ಮೂರು ದಿವಸಗಳಲ್ಲಿ ಉಚ್ಚ ನ್ಯಾಯಾಲಯದಲ್ಲಿ ಏನು ಜಡ್ಜ್‌ಮೆಂಟ್ ಕೊಟ್ಟಿದ್ದಾರೆಂಬುದನ್ನು ತರಿಸಿಕೊಳ್ಳುತ್ತೇನೆ, ಆನಂತರ I will admit. Then we can discuss. Not at this stage. No I want to go through the entire judgment of the High Court. That is all.

ಶ್ರೀ ಕೆ.ಬಿ ಮಲ್ಲಿಕಾರ್ಜುನ:- ಮಾನ್ಯ ಅಧ್ಯಕ್ಷರೇ, ಹೈಕೋರ್ಟ್‌ನಲ್ಲಿ ಏನು ಆದೇಶವಾಗಿದೆ, ಎಂಬುದು ಪ್ರಪಂಚಕ್ಕೆ ಗೊತ್ತಾಗಿ ಹೋಗಿದೆ. ಪತ್ರಿಕೆಗಳಲ್ಲೂ ಬಂದಿದೆ.

ಅಧ್ಯಕ್ಷರು:- ಅದನ್ನು ನಾವು ಓದಬೇಕಲ್ಲಾ, ಅವರು ಏನೇನು ಹೇಳಿದ್ದಾರೆಂಬ ಬಗ್ಗೆ ಡಿಟೈಲ್ಸ್ ಓದಬೇಕಲ್ಲಾ, ಪತ್ರಿಕೆಗಳಲ್ಲಿ ಬಂದಿದೆ ಅಷ್ಟೆ,

ಶ್ರೀ ಕೆ.ಎನ್. ಸುಬ್ಬಾರೆಡ್ಡಿ :- ಮಾನ್ಯ ಅಧ್ಯಕ್ಷರೇ, ತಾವ್ಜ್ಚರ್ಚೆಗೆ ದಿನಾಂಕವನ್ನು ನಿಗದಿ ಮಾಡಿ ನಾನು ಆರ್ಡರ್ ಕಾಪಿಯನ್ನು ಇನ್ನು ಅರ್ಧ ಗಂಟೆಯಲ್ಲಿ ತರಿಸಿಕೊಡುತ್ತೇನೆ.

ಅಧ್ಯಕ್ಷರು:- ತಾವು ಒಂದು ಕೆಲಸ ಮಾಡಿ, ದಯವಿಟ್ಟು ಆ ಜಡ್ಜ್‌ಮೆಂಟ್ ಕಾಪಿಯನ್ನು ಸಂಜೆಯೊಳಗೆ ತಂದು ಕೊಡಿ, ನಾನು ದಿನಾಂಕವನ್ನು ನಿಗದಿ ಮಾಡುತ್ತೇನೆ, ಆದರಲ್ಲಿ ಏನು ವಿಷಯವಿದೆ, ಎಂಬುದನ್ನು ನೋಡಿ ನಾನು ನಾಳೆ ಹೇಳುತ್ತೇನೆ.

ಶ್ರೀ ಬಿ. ಸೋಮಶೇಖರ್:- ಮಾನ್ಯ ಅಧ್ಯಕ್ಷರೇ, ಸರ್ಕಾರ ಈ ವಿಷಯದ ಬಗ್ಗೆ ಚರ್ಚೆ ಮಾಡಲು ಒಪ್ಪಿಕೊಂಡಿರುವುದಕ್ಕೆ ನಮಗೆ ಸಂತೋಷವಿದೆ, ಈಗ ತಾವು ಏನು ಹೇಳುತ್ತಿದ್ದೀರೆಂದರೆ ಉಚ್ಚ ನ್ಯಾಯಾಲಯದಲ್ಲಿ ಆಗಿರುವಂತಹ ತೀರ್ಪನ್ನು ನೋಡಿ ಚರ್ಚೆ ಮಾಡೋಣವೆಂದು ಹೇಳುತ್ತಿದ್ದೀರಿ, ನನ್ನ ಅಭಿಪ್ರಾಯದಲ್ಲಿ ಉಚ್ಚ ನ್ಯಾಯಾಲಯದ ತೀರ್ಪಿಗೂ, ನಾವು ಪ್ರಸ್ತಾಪ ಮಾಡಿರುವಂತಹ ಹಕ್ಕುಚ್ಯುತಿಗೂ ಸಂಬಂಧವಿಲ್ಲ,

ಅಧ್ಯಕ್ಷರು:- ನಾನು ಹೇಳುವಂಥಾದ್ದು ನಿಮ್ಮ ಚರ್ಚೆಗೆ ಅದು ಸಹಾಯಕವಾಗಬಹುದು,

ಶ್ರೀ ಬಿ. ಸೋಮಶೇಖರ್:- ಮಾನ್ಯ ಅಧ್ಯಕ್ಷರೇ, ಇಲ್ಲಿ ನಮ್ಮ ಹಕ್ಕುಚ್ಯುತಿ ಇರುವಂಥಾದ್ದೇ ಬೇರೆ, ಅಲ್ಲಿ ತೀರ್ಪು ಆಗಿರುವಂಥಾದ್ದೇ ಬೇರೆ, ನಾವು ಅಲ್ಲಿ ಆಗಿರುವಂತಹ ತೀರ್ಪಿನ ಬಗ್ಗೆ ಚರ್ಚೆ ಮಾಡುತ್ತಿಲ್ಲ. ಅಲ್ಲಿ ತೀರ್ಪು ಏನಾದರೂ ಕೊಟ್ಟಿರಬಹುದು, ಅದರ ಬಗ್ಗೆ ನಾವು ಚರ್ಚೆ ಮಾಡುತ್ತಿಲ್ಲ, ನಾವು ಚರ್ಚೆ ಮಾಡುತ್ತಿರುವಂತಹ ವಿಚಾರವೇನೆಂದರೆ ನಮ್ಮ ಶಾಸಕರ ಅವಹೇಳನವಾಗಿದೆ, ನಮ್ಮ ಶಾಸಕರ ಹಕ್ಕಿಗೆ ಚ್ಯುತಿ ಬಂದಿದೆ, ಇದಕ್ಕೆ ಕಾರಣಕರ್ತರು ಯಾರು? ಇದಕ್ಕೆ ಪತ್ರಿಕೆಯವರು ಇರಬಹುದು, ಸರ್ಕಾರವಿರಬಹುದು, ಇನ್ನು ಬೇರೆ ಬೇರೆಯವರು ಇರಬಹುದು, ಅದರ ಬಗ್ಗೆ ಚರ್ಚೆಯಾಗಬೇಕಾಗಿದೆ. ತಾವೂ ಅದಕ್ಕೂ ಇದಕ್ಕೂ ತಾಳೆ ಹಾಕುವಂಥಾದ್ದು ಏನು ಇಲ್ಲ.

ಅಧ್ಯಕ್ಷರು:- ಇಲ್ಲಿ ತಾಳೆ ಹಾಕುವಂಥಾದ್ದು ಅಂಥ ಅಲ್ಲ, I want to go through the judgement. ಆ ಜಡ್ಜ್‌ಮೆಂಟ್ ನಿಮಗೆ ಅನುಕೂಲವಾಗಬಹುದು.

ಶ್ರೀ ಬಿ. ಸೋಮಶೇಖರ್:- ಮಾನ್ಯ ಅಧ್ಯಕ್ಷರೇ, ಅದು ಬೇರೆ, ಈಗ ತಾವು ಒಂದು ಹೇಳಬಹುದಾಗಿತ್ತು, ಅದು ಹೈಕೋರ್ಟ್‌ನಲ್ಲಿ ಇದೆ, ಅದರ ಬಗ್ಗೆ ತೀರ್ಪು ಆಗಲೀ ಎಂದು ಹೇಳಬಹುದಾಗಿತ್ತು, ಆದರೆ ಈಗ ಈ ವಿಚಾರವಾಗಿ ಹೈಕೋರ್ಟ್ ತೀರ್ಪು ಕೊಟ್ಟಿದೆ, ಆದುದರಿಂದ ಈ ಹೈಕೋರ್ಟಿನ ಜಡ್ಜ್‌ಮೆಂಟ್ ಮೇಲೆ ನಮ್ಮ ಚರ್ಚೆ ಇಲ್ಲ.

ಅಧ್ಯಕ್ಷರು:- ಮಾನ್ಯ ಸುಬ್ಬಾರೆಡ್ಡಿಯವರೇ, ಆ ಜಡ್ಜ್‌ಮೆಂಟ್ ಕಾಪಿಯನ್ನು ಸಾಯಂಕಾಲ ತಂದು ಕೊಡಿ, ನಾನು ದಿನಾಂಕವನ್ನು ನಿಗದಿ ಮಾಡಿ ನಾಳೆ ಹೇಳುತ್ತೇನೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಮಾನ್ಯ ಅಧ್ಯಕ್ಷರೇ, ತಾವು ದಿನಾಂಕವನ್ನು ನಿಗದಿಮಾಡಿ ಇನ್ನು ಅರ್ಧ ಗಂಟೆಯಲ್ಲಿ ತರಿಸಿಕೊಡುತ್ತೇನೆ.

ಶ್ರೀ ಬಿ. ಸೋಮಶೇಖರ್:- ತಾವು ನಮ್ಮ ರಕ್ಷಣೆಗೆ ಬರಬೇಕು. ನಾವು ಪ್ರವಾಸಕ್ಕೆ ಹೋಗದೆ ಇದ್ದರೂ, ನಾವು ಗೌರವದಿಂದ ಬಾಳುತ್ತಿದ್ದರೂ, ಪತ್ರಿಕೆಯವರು, ಸರ್ಕಾರದವರು, ನಮ್ಮ ಮಾನವನ್ನು ಕಳೆಯುತ್ತಿದ್ದಾರೆ. ಆದುದರಿಂದ ತಾವು ಇದನ್ನು ಆದ್ಯತೆಯ ಮೇಲೆ ತೆಗೆದುಕೊಂಡು ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು:- ನಾನು ಓದಿದ್ದೇನೆ, ಭಾರೀ ತಪ್ಪು ಮಾಹಿತಿ ಪ್ರಚಾರ ಪಡಿಸಿದ್ದಾರೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ :- ಅಧ್ಯಕ್ಷರೇ, ಇದು ಪತ್ರಿಕೆಯವರದ್ದು ಅಲ್ಲ, ರಿಟ್ ಪಿಟಿಷನ್ ಹಾಕಿರುವಂಥಾದ್ದನ್ನು ಅವರು ಪಬ್ಲಿಷ್ ಮಾಡಿದ್ದಾರಷ್ಟೆ, ಈಗ ಇರುವುದೇನೆಂದರೆ ಯಾರು ರಿಟ್ ಪಿಟೀಷನ್ ಹಾಕಿದ್ದಾರೋ, ಅವರ ಮೇಲೆ whether there is a privilege? What transpired? ಕೋರ್ಟಿನ ಆರ್ಡರ್‌ಗೂ, ಇದಕ್ಕೂ ಸಂಬಂಧವಿಲ್ಲ, ಇಲ್ಲಿ ಬೇಕಾಗಿರುವುದು ಏನೆಂದರೆ, ಅವರು ಏನು ಹೇಳಿರುವುದು, ಎಲ್ಲರೂ ವಿದೇಶ ಪ್ರವಾಸ ಹೋಗುವುದಕ್ಕೆ ರೆಡಿಯಾಗಿದ್ದಾರೆ, ಅನೇಕರು ಹೋಗಿದ್ದಾರೆಂದು ಹೇಳುತ್ತಾರೆ. ಆದುದರಿಂದ ತಾವು ದಯಮಾಡಿ ದಿನಾಂಕವನ್ನು ಫಿಕ್ಸ್ ಮಾಡಿ, ನಾನು ಅರ್ಧ ಗಂಟೆಯಲ್ಲಿ ಕಾಪಿಯನ್ನು ಕೊಡಿಸುತ್ತೇನೆ.

ಅಧ್ಯಕ್ಷರು:- ಮಾನ್ಯ ಜಯಪ್ರಕಾಶ್ ಹೆಗ್ಡೆಯವರೇ ಹಾಗೂ ಮಲ್ಲಿಕಾರ್ಜುನರವರೇ, ನೀವು ದಯಮಾಡಿ ನನ್ನ ಕಚೇರಿಗೆ ಬನ್ನಿ, ಈಗ ತಾವು ಏನು ಹಕ್ಕುಚ್ಯುತಿಯನ್ನು ಕೊಟ್ಟಿದ್ದೀರಿ,

ಅದಕ್ಕೆ ಕೆಲವು ಅಮೆಂಡ್‌ಮೆಂಟ್ ಮಾಡಬೇಕಾಗುತ್ತದೆ, ಆದುದರಿಂದ ನೀವು ಬನ್ನಿ, ಮಾತನಾಡೋಣ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ:- ಅಧ್ಯಕ್ಷರೇ, ಅಮೆಂಡ್‌ಮೆಂಟ್ ಮಾಡಿ ಚರ್ಚೆ ಮಾಡುವುದಕ್ಕಿಂತ ಎಲ್ಲಾ ವಿಷಯಗಳನ್ನು ಚರ್ಚೆ ಮಾಡೋಣ.

ಅಧ್ಯಕ್ಷರು:- ಚರ್ಚೆ ಮಾಡೋಣವೆಂದು ಹೇಳುತ್ತಾ ಇದ್ದೇನೆ, This is a fit case for discussion

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ಮಾನ್ಯ ಸುಬ್ಬಾರೆಡ್ಡಿಯವರು, ಎಲ್ಲೋ ಒಂದು ಕಡೆ ಹೈಕೋರ್ಟ್‌ನ ಬಗ್ಗೆ ಚರ್ಚೆ ಮಾಡಬಾರದೆನ್ನುವ ಬಗ್ಗೆ ಮಾತನಾಡಿದರು. ಅವರು ವಕೀಲರು ನಾನೂ ಕೂಡ ನ್ಯಾಯಾಧೀಶರ ಕುಟುಂಬದಿಂದ ಬಂದಿರುವವನು, ಆದುದರಿಂದ ಇಲ್ಲಿ ಅವರವರ ರಕ್ಷಣೆಯನ್ನು ಮಾಡಿಕೊಳ್ಳುತ್ತಾರೆ, ಇಲ್ಲಿ ನಾವು ಶಾಸಕರಾಗಿ ನಾವು ನಮ್ಮ ರಕ್ಷಣೆಯನ್ನು ಮಾಡಿಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು:- ನಾನು ಟೈಮ್ ಫಿಕ್ಸ್ ಮಾಡಬೇಕೆಂದರೆ ಸರ್ಕಾರವನ್ನು ಕೇಳಬೇಕು, ನಾಳೆ 4 ಗಂಟೆಗೆ ಬಿ.ಎ.ಸಿ. ಮೀಟಿಂಗ್ ಕರೆಯುತ್ತಿದ್ದೇವೆ, ಮತ್ತೆ ರಾಜ್ಯಪಾಲರ ಭಾಷಣದ ಚರ್ಚೆ ಇದೆ, ಶಾಸನಗಳ ರಚನೆ ಮಾಡಬೇಕಾಗಿದೆ, ಇದೆಲ್ಲವನ್ನೂ ನೋಡಿಕೊಂಡು ಈ ವಿಷಯವನ್ನು ಯಾವಾಗ ತೆಗೆದುಕೊಳ್ಳಬೇಕೆಂಬ ಬಗ್ಗೆ ತೀರ್ಮಾನ ಮಾಡುತ್ತೇವೆ. ಈಗ ಊಟಕ್ಕೆ ಸಮಯವಾಗಿದೆ. ಈಗ ಸದನವನ್ನು ಎರಡೂವರೆ ಘಂಟೆವರೆಗೆ ಮೂಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 1.30ಕ್ಕೆ ಮುಂದೂಡಲ್ಪಟ್ಟು ಮತ್ತೆ ಎರಡೂವರೆ ಘಂಟೆಗೆ ಸೇರಲು ತೀರ್ಮಾನಿಸಿತು)

(ಸದನವು 3 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತ್ತು. ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ ನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಅಧ್ಯಕ್ಷರು:- ಏನು ಈ ಕ್ರಿಕೆಟ್ ಜ್ವರವು ನಮ್ಮ ಸಭೆಗೂ ತಾಕಿದಂತೆ ಕಾಣುತ್ತದೆ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಮಧ್ಯಾಹ್ನವೂ ಕೂಡ ಒಂದು ಹಾಜರಾತಿ ಪುಸ್ತಕವನ್ನು ಇಡಬೇಕು. ಹಾಗೆಯೇ ಮಂತ್ರಿಗಳಿಗೂ ಹಾಜರಾತಿ ಪುಸ್ತಕವನ್ನು ಇಡಬೇಕು. ಅಸೆಂಬ್ಲಿ ಎಂದರೆ ಸದಸ್ಯರು ಅಷ್ಟೇ, ಮಂತ್ರಿಗಳು ಅಷ್ಟೇ, ತಾವು ಕೋರಂ ಬೆಲ್ ಹೊಡಿಸುವುದಕ್ಕೆ ಪ್ರಾರಂಭ ಮಾಡಿ ಈಗ ಸಮಯ 3-20 ಆಯಿತು. ಈಗಾಗಲೇ ಬೆಲ್ ಹೊಡೆಯುವುದಕ್ಕೆ ಪ್ರಾರಂಭವಾಗಿ ಅರ್ಧ ತಾಸು ಆಯಿತು.

ಅಧ್ಯಕ್ಷರು:- ಮಾನ್ಯ ಎಸ್.ಎಸ್. ಪಾಟೀಲರೆ, ಈಗಾಗಲೇ ಬೆಲ್ ಹೊಡೆಯುವುದಕ್ಕೆ ಪ್ರಾರಂಭವಾಗಿ 40 ನಿಮಿಷವಾಯಿತು. ಬೆಲ್ ಹೀಟ್ ಆಗಿ ಸುಟ್ಟು ಹೋಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್:- ಹೌದು, ಮಾನ್ಯ ಅಧ್ಯಕ್ಷರೆ, ಮತ್ತೇ ಹೇಗೆ ಮಾಡುವುದು ಅಧ್ಯಕ್ಷರೆ? ನಾವು ಆಡಳಿತ ಪಕ್ಷದವರಿಗೆ ಹೇಳುವ ಹಾಗಿಲ್ಲ. ಏಕೆಂದರೆ ನಮ್ಮವರೂ ಹಾಗೆಯೇ ಇದ್ದಾರೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ಊ) ಹೆಚ್ಚುವರಿ ಆಹಾರ ಧಾನ್ಯ ಬಿಡುಗಡೆಗಾಗಿ ದೆಹಲಿಗೆ ಸರ್ವಪಕ್ಷನಿಯೋಗ ಹೋಗುವ ಬಗ್ಗೆ.